**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ. ನಂ.48/2019** **ಫ್ರಾ.ಸಾ –3**
**ಚಾ.ಸಾ – 8**

**ದಿನಾಂಕಃ 30.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಕೆ ಎಂ ಚಂದ್ರಮೌಳಿ |
| ತಂದೆಯ ಹೆಸರು | : | ಸಿ ಮಾದಯ್ಯ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಪಿ ಡಿ ಓ |
| ವಾಸ ಸ್ಥಳ | : | ಕಾರ್ಮಾಡು ಗ್ರಾಮ |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನಾನು 24.08.2017 ರಿಂದ 09.07.2019 ರ ತನಕ ಗೋಣಿಕೊಪ್ಪ ಗ್ರಾಮ ಪಂಚಾಯಿತಿಯಲ್ಲಿ ಪಿ ಡಿ ಓ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 12.10.2018 ರಂದು ಗೋಣಿಕೊಪ್ಪ ಪೊಲೀಸರು ಆರೋಪಿಯ ವಾಸದ ದೃಡೀಕರಣದ ಬಗ್ಗೆ ಕೋರಿದ್ದು ಆರೋಪಿ 1 ನೇ ವಿಭಾಗದ ಸರಳ ವಸಂತ್ ರವರ ಲೈನ್ ಮನೆಯಲ್ಲಿ ವಾಸವಿರುವುದಾಗಿ ದೃಡೀಕರಣ ಪತ್ರ ನೀಡಿರುತ್ತೇನೆ.

ಗೋಣಿಕೊಪ್ಪ ನಗರದಲ್ಲಿರುವ **Coorg Diagnostics center** ನಡೆಸಲು ಪರವಾನಗಿ ಬಗ್ಗೆ ಕೋರಿದ್ದು ಅದರಂತೆ ಗೋಣಿಕೊಪ್ಪ 2 ನೇ ವಾರ್ಡ್ ನಲ್ಲಿ Ravikrian complex ನಲ್ಲಿ ಕೆ ಎಂ ಪೂಣಚ್ಚ ರವರ ಹೆಸರಿನಲ್ಲಿ **Coorg Diagnostics center** ನಡೆಸಲು 2018-2019 ರ ಸಾಲಿನಲ್ಲಿ ಪರವಾನಗಿಯನ್ನು ಗೋಣಿಕೊಪ್ಪ ಗ್ರಾಮ ಪಂಚಾಯಿತಿ ನೀಡಿರುವುದಾಗಿ ದೃಡೀಕರಣ ಪತ್ರ ನೀಡಿರುತ್ತೇನೆ.

ಸಾಕ್ಷಿ ದೃಡೀಕರಣ ಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ ಪಿ 5 ಮತ್ತು 6 ಎಂದು ಸಹಿಗಳನ್ನು ನಿ ಪಿ 5(ಎ) ಮತ್ತು 6(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ. ಬಿ. ಎಸ್ ವಕೀಲರಿಂದಃ

ಪಂಚಾಯಿತಿಯಲ್ಲಿ ವಾಸ ದೃಡೀಕರಿಸುವ ಬಗ್ಗೆ ದಾಖಲೆ ಇರುವುದಿಲ್ಲ. ಆರೋಪಿ ವಾಸ ಇದ್ದ ಬಗ್ಗೆ ನಾನು ಖುದ್ದು ಹೋಗಿಲ್ಲ Bill collector ಹೋಗಿರುತ್ತಾರೆ. Bill collector ಮಹಜರ್ ಮಾಡಿರುತ್ತಾರೆ, ಆದರೆ ಅದು ಕೊಟ್ಟಿರುವುದಿಲ್ಲ. ಯಾವ ಸರ್ವೆ ನಂಬರ್ ನಲ್ಲಿ ಆರೋಪಿಗೆ ಕಟ್ಟಡ ಇದೆ ಎಂದು ಹೇಳಿಲ್ಲ. ಗೋಣಿಕೊಪ್ಪ ಸರ್ಕಾರಿ ಆಸ್ಪತ್ರೆ ಹಿಂಭಾಗ 2 ನೇ ವಾರ್ಡ್ ಇರುತ್ತದೆ ಎಂದರೆ ಸರಿ. ಮುಖ್ಯ ರಸ್ತೆ 4 ನೇ ವಾರ್ಡ್ ಎಂದರೆ ಗೊತ್ತಿಲ್ಲ. ಗೋಣಿಕೊಪ್ಪದ ಉಮಾ ಮಹೇಶ್ವರಿ ದೇವಸ್ಥಾನದಿಂದ ಎಡಕ್ಕೆ ಇರುವುದು ಯಾವ ವಾರ್ಡ್ ಎಂದು ಗೊತ್ತಿಲ್ಲ. ಆರೋಪಿಯ ಕಟ್ಟಡ ಎಲ್ಲಿದೆ ಎಂದು ನಾನು ನೋಡಿಲ್ಲ. ನನಗೆ ಈ ಮಾಹಿತಿ ಇಲ್ಲದಿರುವುದರಿಂದ ನಾನು ನಿ ಪಿ 4 ಮತ್ತು 5 ದಾಖಲೆ ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ